# ಉಪ ತಹಶೀಲ್ದಾರರ ನ್ಯಾಯಾಲಯ, ತಂಬ್ರಹಳ್ಳಿ-583224

**OFFICE OF THE DEPUTY TAHASILDAR, THAMBRAHALLI-583224**

ಎ.ವಿಲೇ.ನಂ.ಕಂ.ಪಹಣಿ.ವಿವಾದ/34/2015-16 ದಿನಾಂಕ: 07.04.2016

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ತಂಬ್ರಹಳ್ಳಿ

| ವಾದಿ | ಪ್ರತಿವಾದಿ |
|---|---|
| 1) ಅಮರಿ ಕಾಳಪ್ಪ 2) ಅಮರಿ ಗವಿಸಿದ್ದಪ್ಪ ಎಲ್ಲರ ತಂದೆ ಅಮರಿ ಸಿದ್ದಪ್ಪ ವಾಸ ಅಂಕಸಮುದ್ರ ಗ್ರಾಮ ಹಗರಿ ಬೊಮ್ಮನಹಳ್ಳಿ ತಾಲೂಕು | ಕಂದಾಯ ನಿರೀಕ್ಷಕರು ತಂಬ್ರಹಳ್ಳಿ |

**ವ್ಯಾಜ್ಯದ ಜಮೀನಿನ ವಿವರ**

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ಅಂಕಸಮುದ್ರ | 174/ಡಿ | 1.32 ಎಕರೆ |

*****

**ಪೀಠಿಕೆ:**

ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಅಂಕಸಮುದ್ರ ಗ್ರಾಮದ ಸ.ನಂ.174/ಡಿ ವಿಸ್ತೀರ್ಣ 1.32 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಪೋತಿ ವಾರಸ ಪ್ರಕಾರ ಹಕ್ಕುಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ: ಹೆಚ್.18/2015-16, ರಲ್ಲಿ ಸಂಬಂಧಿಸಿದ ಅವಶ್ಯ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸದೇ ಇರುವುದರಿಂದ ಈ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:17.12.2015 ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಪ್ರಕಾರ ವ್ಯಾಜ್ಯದ ಜಮೀನು ಮೂಲತಃ ಅಮರಿ ಉರ್ಫ ಹಲಗೇರಿ ನಾಗಬಸವ್ವ ಗಂಡ ಲೇಟ್ ಭರ್ಮಪ್ಪ ಅಂಕಸಮುದ್ರ ಗ್ರಾಮ ಇವರ ಜಮೀನಾಗಿದ್ದು ಸದರಿಯವರು ದಿನಾಂಕ:28.02.2005 ರಂದು ಮರಣ ಹೊಂದಿದ್ದು ಹಾಗೂ ಅವರ ಮಗನಾದ ಭರ್ಮಪ್ಪ ರವರು ದಿನಾಂಕ:06.07.1915 ರಂದು ಮರಣ ಹೊಂದಿದ್ದು ಸದರಿಯವರಿಗೆ ಸಂತಾನವಿಲ್ಲದ ಕಾರಣ ಪ್ರಸ್ತುತ ಜಮೀನಿನ ನೇರ ವಾರಸುದಾರರಾದ ಅಮರಿ ಹಿರೇಸಿದ್ದಪ್ಪ ರವರ 2ನೇ ಮಗನಾದ ಅಮರಿ ಗವಿಸಿದ್ದಪ್ಪ (ಪೋತಿ) ಇವರ ಮಕ್ಕಳಾದ 1 ಮತ್ತು 2ನೇ ವಾದಿಗಳ ಹೆಸರಿಗೆ ಜಂಟಿಯಾಗಿ ಖಾತೆ ಮಾಡಿಕೊಡುವಂತೆ ಕೋರಿರುತ್ತಾರೆ.

ಪ್ರಸ್ತುತ ಹಕುಬದಲಾವಣೆ ಸಂಬಂದ ನಮೂನೆ 21 ರ ನೋಟೀಸ್ ಪ್ರಚುರಪಡಿಸಲಾಗಿ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲ ಆದರೆ ಮನವಿದಾರರು ತಮ್ಮ ಕುಟುಂಬದ ವಂಶಸ್ಥರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸುವ ಬದಲಾಗಿ ತಹಶೀಲ್ದಾರರು ಹಗರಿ ಬೊಮ್ಮನಹಳ್ಳಿ ಇವರಿಂದ ಪಡೆದ ಹಿಂಬರಹವನ್ನು ಮನವಿಯೊಂದಿಗೆ ಲಗತ್ತಿಸಿರುತ್ತಾರೆ, ಕಾರಣ ಕಂದಾಯ ನಿರೀಕ್ಷಕರು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಸಲ್ಲಿಸಿರುತ್ತಾರೆ.

ವಾದಿಗಳು ವಿಚಾರಣೆಗೆ ಹಾಜರಾಗಿ ವಿಚಾರಣಾ ವೇಳೆ ವಾದಿಗಳ ವಂಶವೃಕ್ಷಕ್ಕೆ ಅನುಗುಣವಾಗಿ ಮರಣ ಹೊಂದಿದವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸುವಂತೆ ಸೂಚಿಸಿ ಸಾಕಷ್ಟು ಕಾಲಾವಕಾಶವನ್ನು ನೀಡಿದ್ದರೂ ವಾದಿಗಳು ಸದರಿ ಅವಶ್ಯ ಮರಣ ಪ್ರಮಾಣ ಪತ್ರಗಳನ್ನು ಹಾಜರುಪಡಿಸುವಲ್ಲಿ ವಿಫಲರಾಗಿರುತ್ತಾರೆ, ಕಾರಣ ಪ್ರಸ್ತುತ ಪೋತಿ ವಾರಸು ಪ್ರಕಾರ ಹಕ್ಕುಬದಲಾವಣೆಗೆ ವಂಶವೃಕ್ಷಕ್ಕೆ ಅನುಗುಣವಾಗಿ ಮರಣ ಪ್ರಮಾಣ ಪತ್ರವು ಅವಶ್ಯಕವಾಗಿರುವುದರಿಂದ ಹಾಗೂ ವಾರಸತ್ವದ ಬಗ್ಗೆ ಸೂಕ್ತ ದಾಖಲೆಗಳಿಲ್ಲದ ಕಾರಣ ಪ್ರಕರಣವನ್ನು ಈ ಹಂತದಲ್ಲಿಯೇ ಮುಕ್ತಾಯಗೊಳಿಸುವುದು ಸೂಕ್ತವೆಂದು ಕಂಡುಬಂದಿರುವುದರರಿಂದ ಈ ಕೆಳಗಿನಂತೆ ಆದೇಶ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಗ್ರಾಮದ ಅಂಕಸಮುದ್ರ ಗ್ರಾಮದ ಸ.ನಂ.174/ಡಿ ವಿಸ್ತೀರ್ಣ 1.32 ಎಕರೆ ಜಮೀನಿಗೆ ಸಂಬಂಧಿಸಿದಂತೆ ಅವಶ್ಯ ದಾಖಲೆಗಳೊಂದಿಗೆ ನಿಯಮಾನುಸಾರ ಪೋತಿ ವಾರಸು ಪ್ರಕಾರ ಹಕ್ಕು ಬದಲಾವಣೆಗಾಗಿ ಮನವಿ ಸಲ್ಲಿಸುವಂತೆ ಸೂಚಿಸುತ್ತಾ ಪ್ರಸ್ತುತ ವಹಿವಾಟನ್ನು ಈ ಹಂತದಲ್ಲಿಯೇ ಮುಕ್ತಾಯಗೊಳಿಸಿ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ:07.04.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

07/04

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ನಾಡ ಕಛೇರಿ ತಂಬ್ರಹಳ್ಳಿ.

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.